# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: LP.No. Ad.Com/WST/0590/17-18

ಸಹಾಯಕ ನಿರ್ದೇಶಕರವರ ಕಛೇರಿ,
ನಗರ ಯೋಜನೆ (ಪಶ್ಚಿಮ),
ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ,
ಬೆಂಗಳೂರು, ದಿನಾಂಕ: 09-03-2020.

ಅನುಸೂಚಿ-(VII)
(ಉಪವಿಧಿ ಸಂಖ್ಯೆ: 5.3)
"ಪ್ರಾರಂಭಿಕ ಪ್ರಮಾಣ ಪತ್ರ"

ವಿಷಯ:- ಸಂಖ್ಯೆ:83(83/ಎ), ಇಂಡಸ್ಟ್ರೀಯಲ್ ಸಬ್‌ರಬ್, ಬೆಂಗಳೂರು ವಾರ್ಡ್ ಸಂಖ್ಯೆ:44. ಇಲ್ಲಿ ನಿರ್ಮಿಸಲಾಗುತ್ತಿರುವ "ವಾಣಿಜ್ಯ /ಅಪಾರ್ಟ್‌ಮೆಂಟ್" ಕಟ್ಟಡಕ್ಕೆ 'ಪ್ರಾರಂಭಿಕ ಪ್ರಮಾಣ ಪತ್ರ' ನೀಡುವ ಬಗ್ಗೆ.

ಉಲ್ಲೇಖ:- 1) ನಕ್ಷೆ ಮಂಜೂರಾತಿ ಸಂಖ್ಯೆ: Ad.Com/WST/0590/17-18, Date:19/01/2018.
2) ಅರ್ಜಿದಾರರ ಮನವಿ ದಿನಾಂಕ: 18/01/2020.
3) ದಿನಾಂಕ: 02-03-2020 ರ ನಕ್ಷೆ ಮಂಜೂರಾತಿ ಸಮಿತಿ ಸಭೆಯ ನಡವಳಿ.

******

ಸ್ವತ್ತಿನ ಸಂಖ್ಯೆ:83(83/ಎ), ಇಂಡಸ್ಟ್ರೀಯಲ್ ಸಬ್‌ರಬ್, ಬೆಂಗಳೂರು ವಾರ್ಡ್ ಸಂಖ್ಯೆ:44 ಇಲ್ಲಿ ನಿರ್ಮಿಸುತ್ತಿರುವ ಬೇಸ್‌ಮೆಂಟ್, ನೆಲ, 1ನೇ, 2ನೇ, 3ನೇ ಮತ್ತು ಟೆರೆಸ್ ಅಂತಸ್ತಿನ "ವಾಣಿಜ್ಯ /ಅಪಾರ್ಟ್‌ಮೆಂಟ್" ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ.ಸಂಖ್ಯೆ: Ad.Com/WST/0590/17-18, ದಿನಾಂಕ: 19-01-2018 ರಂದು ನಕ್ಷೆ ಮಂಜೂರಾತಿ ನೀಡಲಾಗಿತ್ತು. ಉಲ್ಲೇಖ(2) ರಲ್ಲಿನ ಅರ್ಜಿದಾರರ ಮನವಿಯ ಮೇರೆಗೆ "ವಾಣಿಜ್ಯ /ಅಪಾರ್ಟ್‌ಮೆಂಟ್" ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ:21/01/2020 ಮತ್ತು 17/02/2020 ರಂದು ಸ್ವತ್ತಿನ ಸ್ಥಳವನ್ನು ಪರಿಶೀಲಿಸಿದ್ದು, ಅರ್ಜಿದಾರರು ವಲಯ ನಿಯಮಾವಳಿಯಂತೆ, ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ/ಕಬ್ಬಿಣದ ಕಂಬಗಳನ್ನು ಅಳವಡಿಸಿರುತ್ತಾರೆ. ಉಲ್ಲೇಖ (3) ರಲ್ಲಿ ಸದರಿ ಸ್ವತ್ತಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪಶ್ಚಿಮ ವಲಯದ ನಕ್ಷೆ ಮಂಜೂರಾತಿ ಸಮಿತಿಯು ಅನುಮೋದಿಸಿರುವ ಮೇರೆಗೆ, ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ.93,500/- (D.D.No:183441, Dt:06/03/2020, Karnataka Bank Ltd, Branch: K.H. Road, Rs.93,500/-) ಗಳನ್ನು ಅರ್ಜಿದಾರರು ಪಾವತಿಸಿದ್ದು, ಸದರಿ ಮೊತ್ತದ ಡಿ.ಡಿ.ಯ ರಸೀತಿ ಸಂಖ್ಯೆ:RE-ifms210—TP/000051, ದಿನಾಂಕ:07/03/2020 ರಂದು ಸಂದಾಯಿಸಿಕೊಳ್ಳಲಾಗಿದೆ. "ವಾಣಿಜ್ಯ/ಅಪಾರ್ಟ್‌ಮೆಂಟ್" ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1. ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು. ಉದ್ದೇಶಿತ ಕಟ್ಟಡದಲ್ಲಿ ವಲಯ ನಿಯಮಾವಳಿಯ ಪರಿಮಿತಿಯೊಳಗೆ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದ್ದಲ್ಲಿ, ನಿಗಧಿತ ಅವಧಿಯೊಳಗೆ ಅಗತ್ಯ ಮಾರ್ಪಾಡು ನಕ್ಷೆಗೆ ಮಂಜೂರಾತಿ ಪಡೆದು ನಂತರ ಕಾಮಗಾರಿಯನ್ನು ಮುಂದುವರೆಸುವುದು.
2. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ, ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3. ಕಟ್ಟಡದಲ್ಲಿ ಮಂಜೂರಾತಿ ನಕ್ಷೆಯಂತೆ, ಅಗತ್ಯ ಸಂಖ್ಯೆಯ ವಾಹನ ನಿಲ್ದಾಣಕ್ಕೆ ಸ್ಥಳಾವಕಾಶವನ್ನು ಕಾಯ್ದಿರಿಸುವುದು.
4. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ, ಕೆಲಸಗಾರರಿಗಾಗಿ ತಾತ್ಕಾಲಿಕ ಶೌಚಾಲಯವನ್ನು ನಿರ್ಮಿಸತಕ್ಕದ್ದು.
5. ಕಟ್ಟಡ ಕಾಮಗಾರಿ ಸ್ಥಳದಲ್ಲಿ ಮಂಜೂರಾತಿ ನಕ್ಷೆಯನ್ನು ಪ್ರದರ್ಶಿಸತಕ್ಕದ್ದು.

[signature] 09/03/2020
ಸಹಾಯಕ ನಿರ್ದೇಶಕರು,
ನಗರ ಯೋಜನೆ (ಪಶ್ಚಿಮ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಇವರಿಗೆ:-

**Sri. R B S Religious Association (Regd) by its President K.K. Ramchandran & its Secretary R.K. Sundaram No.83(83), Industrial Sub urb, Bangalore, Ward No.44, PID No:10-1-83.**

ಪ್ರತಿಯನ್ನು:- ಕಾರ್ಯಪಾಲಕ ಅಭಿಯಂತರರು (ಮಹಾಲಕ್ಷ್ಮೀಪುರಂ)/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಹಾಲಕ್ಷ್ಮೀಪುರಂ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

Scanned with CamScanner